ಎಷ್ಟು ಋಣಿಯಾಗಿದ್ದರೂ ಸಾಲದು. ಇವರು ಬೆಳೆದಂತೆ ನಾನೂ ಬೆಳೆದಿದೀನಿ. ಇವರ ಹಿರಿಮೆ ಹೆಚ್ಚಿದಂತೆ ನಾನೂ ಆ ಸಂತಸದಲ್ಲಿ ಪಾಲುದಾರಳಾಗಿದ್ದೇನೆ. ಕಲಾವಿದನ ಜೀವನ ಹೂ ಹಾಸಿಗೆಯಲ್ಲ. ಅದರಲ್ಲೂ ಯಜಮಾನರದ್ದು ಮಗುವಿನಂಥ ಮನಸ್ಸು. ಹಿಂದೊಮ್ಮೆ ಶಿವರಾಜ ಕುಮಾರ ಕೂತಿದ್ದ ದೋಣಿ ಮಗುಚಿಕೊಂಡು ನೀರಿನಲ್ಲಿ ಆತ ಬಿದ್ದು ಹೋದಾಗ ಒಂಬತ್ತು ವರ್ಷಗಳ ದೀರ್ಘ ತಪಸ್ಸಿನ ನಂತರ ಹುಟ್ಟಿದ ಮಗ, ಅವನಿಗೆ ಏನಾದರೂ ಅಪಾಯವಾಗಿದ್ದರೆ ಎಂಬುದನ್ನು ನೆನೆಸಿಕೊಂಡರೆ ಈಗಲೂ ನಮ್ಮಿಬ್ಬರ ಎದೆ ಡವಗುಟ್ಟುತ್ತದೆ.

ಮುಂದೆ ಕಾಲ ಹೇಗೆ ಸರಿಯುತ್ತದೆ ಎನ್ನುವುದು ಭವಿಷ್ಯಕ್ಕೆ ಬಿಟ್ಟದ್ದು. ಈಗ ಇವರಿಗೂ 63ವರ್ಷ ವಯಸ್ಸು. ಮೂರು ವರ್ಷಗಳ ಕಾಲ ಅಭಿನಯದಿಂದ ದೂರವಿದ್ದ ಇವರನ್ನು ಅಭಿಮಾನಿಗಳು 'ಜೀವನಚೈತ್ರ'ದ ಮೂಲಕ ಮತ್ತೆ ಬೆಳ್ಳಿತೆರೆಗೆ ಒತ್ತಾಯ ಮಾಡಿ ಕರೆಸಿಕೊಂಡರು... ಅವರಿಗೆ ಇಷ್ಟು ವಯಸ್ಸಾಗಿದೆ ಅನ್ನೋದನ್ನು ನಂಗೇ ನಂಬಲಾಗದು... ಹದಿನಾಲ್ಕು ವರ್ಷಗಳಿಂದಲೂ ಎಡೆಬಿಡದೆ ಯೋಗಸಾಧನೆಯಿಂದ ಆರೋಗ್ಯಕರವಾಗಿ ಬೆಳೆಸಿಕೊಂಡ ವಜ್ರಕಾಯ... ಅದಕ್ಕೆ ಮೊದಲು ಬೆಳಗ್ಗೆ ವ್ಯಾಯಾಮ ಮಾಡ್ತಿದ್ದರಷ್ಟೆ. ಈಗಲೂ ಮುಂಜಾನೆ ಐದು ಹೊಡಿಯಿತೆಂದರೆ ದೈನಂದಿನ ಚಟುವಟಿಕೆಗೆ ರೆಡಿ. ಮೊದಲು ಸ್ನಾನ, ನಂತರ ಪೂಜೆ. ಮನೆದೇವರು ವೆಂಕಟರಮಣಸ್ವಾಮಿ. ಆದರೆ ಇವರ ದೈವಭಕ್ತಿ ಅದ್ಭುತ. ಇವರ ಸರಳತೆ ನಮಗೆ ಮಾತ್ರ ಗೊತ್ತು. ನಮ್ಮ ಮನೆಯಲ್ಲಿ ಎಂದೂ ಬೆಳಗಿನ ಟಿಫನ್‌ಗೆ ಒಂದೇ ಒಂದು ತಿಂಡಿ. ಅದೇ ಎಲ್ಲರಿಗೂ. ಶೂಟಿಂಗ್‌ಗೆ ಹೋದಾಗಲೂ ಅಷ್ಟೆ. ಯಜಮಾನರಿಗೂ ಯೂನಿಟ್‌ನವರೆಲ್ಲ ಏನು ತಿಂತಾರೋ ಅದೇ. ಹೀಗಾಗಿ ದೋಸೆ, ಇಡ್ಲಿ, ಉಪ್ಪಿಟ್ಟು ಇಂತಹ ಸಾಮಾನ್ಯ ತಿಂಡಿಗಳೇ ಪ್ರತಿ ದಿನ. ನಾನ್ ವೆಜಿಟೇರಿಯನ್ ಅಂದರೆ ಇವರಿಗೆ ಮೊದಲಿನಿಂದಲೂ ತುಂಬಾ ಪ್ರೀತಿ. ಮೊದಲು ದಿನವೂ ಶಾಕಾಹಾರ ಇರಬೇಕಾಗಿತ್ತು. ಈಗ ವಾರದಲ್ಲಿ ಎರಡು ಮೂರು ಸಲ ಮಾತ್ರ. ಆದರೆ ಸೋಮವಾರ, ಗುರುವಾರ, ಶನಿವಾರ ಇವನ್ನು ಮುಟ್ಟೋದೂ ಇಲ್ಲ. ಅಂಥ ದಿನಗಳಲ್ಲಿ ಇವರಿಗೆ ಪ್ರಿಯವಾದ ಹೆಸರುಬೇಳೆ ಹುಗ್ಗಿ, ಕೋಸುಂಬರಿ ಇಂಥದ್ದನ್ನು ಮಾಡ್ತೀವಿ. ಇವ್ರಿಗೇ ಕೇಳದಿದ್ದರೂ ಆಗಿಂದಾಗ್ಗೆ ಇವರಿಗೆ ಪ್ರಿಯವಾದ ನುಗ್ಗೇಕಾಯಿ, ಹಲಸಿನಕಾಯಿ ಇಂಥ ತರಕಾರಿಗಳನ್ನ ಮಾಡ್ತೀನಿ. ಬಾದಾಮಿ ಹಲ್ವ ಅಂದ್ರೆ ಅದೇನು ಪರಮ ಪಾವನವೋ! ಚಿಕ್ಕ ವಯಸ್ಸಿನಲ್ಲಿ ಒಬ್ಬಟ್ಟನ್ನು ತಿಂತಾ ಇದ್ದರು. ಅದರಲ್ಲೂ ಒಬ್ಬಟ್ಟಿನ ಸಾರು ಅಂದರೆ ಪಂಚಪ್ರಾಣ.

ಈಗ ಯಜಮಾನರು ಹೆಚ್ಚಿಗೆ ಸಿನಿಮಾಗಳಲ್ಲಿ ಮಾಡುತ್ತಿಲ್ಲವಾದ್ದರಿಂದ ಅವರ ಮುಖ್ಯ ಹವ್ಯಾಸ ಓದುವುದು, ಮಕ್ಕಳು ಅಭಿನಯಿಸಲಿರುವ ಚಿತ್ರಗಳ ಕಥೆಗಳನ್ನು ಪರಿಶೀಲಿಸುವುದು, ಟೀವಿ ನೋಡೋದು ಇತ್ಯಾದಿ. ಸಂಜೆ 4–5 ಕಿಲೋಮೀಟರ್ ವಾಕ್ ಹೋಗಿ ಬರ್ತಾರೆ. ರಾತ್ರಿ 8.30ರೊಳಗಾಗಿ ಊಟ ಮುಗಿಸಿ ಬಿಡಬೇಕು. ಮನೆ ಕಾಂಪೌಂಡಿನಲ್ಲೇ ಒಂದಿಷ್ಟು ತಿರುಗಾಡಿ ನಂತರ ಓದುತ್ತಾ ಕೂಡೋದು. ರಾತ್ರಿ 10ಗಂಟೆ ನಂತರ ಸುಖನಿದ್ರೆ.

ಕನ್ನಡ ಜನತೆ ಎಲ್ಲಿಯವರೆಗೂ ಇವರನ್ನು ನೋಡಲು ಸಿದ್ಧರೋ ಅಲ್ಲಿಯವರೆಗೂ ಯಜಮಾನರು ಚಿತ್ರರಂಗ ಬಿಡೋದೇ ಇಲ್ಲ. ಮಕ್ಕಳನ್ನು ಚಿತ್ರರಂಗಕ್ಕೆ ಬರಬೇಕೆಂದು ನಾವೇನೂ ಬಲವಂತ ಮಾಡಲಿಲ್ಲ. ಅವರು ತಾವಾಗೇ ಬಂದರು. ನನ್ನ ಮಕ್ಕಳು ತುಂಬಾ ಓದಲಿ ಅಂತ ನಾನು ಬಯಸಿದಾಗ ಇವರು ಹೇಳ್ತಿದ್ದರು... 'ಕಲೆ ಎಲ್ಲರನ್ನೂ ಕೈಬೀಸಿ ಕರೆಯೋದಿಲ್ಲ ಕಣೆ... ಅವರೇನಾಗಬೇಕೋ ಅದೇ ಆಗ್ತಾರೆ...' ಅಂತ. ಕಲಾದೇವಿ ನನ್ನ ಕುಟುಂಬವನ್ನೇ ಕೈಬೀಸಿ ಕರೆಯುತ್ತಿದ್ದಾಳೆ. ನಮ್ಮನ್ನು ನಡೆಸಿಕೊಳ್ಳೋದು ಅವಳಿಗೆ ಸೇರಿದ್ದು.

❖